**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**
**ಕನಕಪುರ.**

CC No. 645/2012

CW -3 PW - 2

| | | |
|---|---|---|
| ಹೆಸರು | ಃ | ಶಿವರಾಜು |
| ತಂದೆಯ ಹೆಸರು | ಃ | ಮರಿಯಣ್ಣ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಅರಣ್ಯ ರಕ್ಷಕ |
| ವಾಸ | ಃ | ಮರಳಗಾಳು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 14.09.2022

ನಾನು 1990 ರಿಂದ ಇಲ್ಲಿಯರವರೆಗೆ ಅರಣ್ಯ ವೀಕ್ಷಕರಾಗಿ ಕನಕಪುರ ವಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 22.02.2011 ರಂದು ಚಾಸಾ-1 ರವರ ಜೊತೆ ಗಸ್ತುಗೆ ಹೋಗಿದ್ದ ಸಮಯದಲ್ಲಿ ಬೆಟ್ಟಳ್ಳಿ ವಾಡೆಯ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾಗ ಕ್ವಾರೆ ಪಕ್ಕದಲ್ಲಿ ರಸ್ತೆ ಮಾಡಲು ಆಲೆ, ಜುಜ್ಜಲಿ, ಬೆಪ್ಪಾಲೆ, ಉರುಗಲ ಮರಗಳನ್ನು ಬುಡ ಸಮೇತ ಹಿಟಾಚಿ ವಾಹನದಿಂದ ತೆಗೆದು ಕೆಳಕ್ಕೆ ಉರುಳಿಸಿರುತ್ತಾರೆ. ಅರಣ್ಯ ಪ್ರದೇಶದ ಸರ್ವೆ ನಂ. 67 ಕ್ಕೆ ಸಂಬಂಧಿಸಿದ್ದು. ಮಹಜರ್ ಕ್ರಮ ಜರುಗಿಸಿರುತ್ತೇವೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ.

ಅನುಮತಿಸಲಾಯಿತು).

ಪಾಟೀ ಸವಾಲು : ಎಪಿಪಿ ಯವರಿಂದ :

ದಿನಾಂಕಃ 22.02.2011 ರಂದು ನಾನು ಮತ್ತು ಸಿಬ್ಬಂದಿಯ ಜೊತೆ ಅರಣ್ಯ ಪ್ರದೇಶಕ್ಕೆ ಗಸ್ತು ಮಾಡಲು ಹೋಗಿರುತ್ತೇನೆ ಎಂದರೆ ಸರಿ. ಸರ್ವೆ ನಂ. 67 ರ ಒಳಗಡೆ ಹಿಟಾಚಿ ವಾಹನ ಅಕ್ರಮವಾಗಿ ಪ್ರವೇಶ ಮಾಡಿದ್ದು ನಾನು ಮತ್ತು ಸಿಬ್ಬಂದಿ ಹೋಗಿ ವೀಕ್ಷಿಸಿದಾಗ ಅದು ಕಲ್ಲು ಗಣಿಗಾರಿಕೆ ಗುತ್ತಿಕೆ ಸಂಖ್ಯೆ 728 ಎಂಬುದಕ್ಕೆ ಸಂಬಂಧಿಸಿದ್ದು ಹಿಟಾಚಿ ವಾಹನ ಕೋರೆ ಪ್ರದೇಶವನ್ನು ಹೊರತು ಪಡಿಸಿ ಹೊರಗಿನ ಪ್ರದೇಶದಲ್ಲಿ ರಸ್ತೆಯನ್ನು ನಿರ್ಮಾಣ ಮಾಡಲು ಅಕ್ರಮವಾಗಿ ಅರಣ್ಯ ಪ್ರದೇಶದಲ್ಲಿ ಹಿಟಾಚಿ ವಾಹನವನ್ನು ನಿಲ್ಲಿಸಿರುವುದು ಕಂಡು ಬಂದಿರುತ್ತದೆ. ನಿಪಿ-1 ರಲ್ಲಿರುವ 1 ರಿಂದ 9 ಮರಗಳನ್ನು ಕಡಿದು ನಾಶಪಡಿಸಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಮತ್ತು ಪಂಚರು ಯಾರು ಇಲ್ಲದೆ ಇದ್ದ ಕಾರಣ ನಾವೇ ಪಂಚರಾಗಿದ್ದು ಮಹಜರ್ ಕ್ರಮ ಜರುಗಿಸಿರುತ್ತೇವೆ ಎಂದರೆ ಸರಿ.

ಪಾಟೀ ಸವಾಲು : ಶ್ರೀ. ಆರ್.ಸಿ. ಆರೋಪಿತರ ಪರ ವಕೀಲರಿಂದಃ

ಬೆಟ್ಟಳ್ಳಿ ವಾಡೆಯಲ್ಲಿ 20 ವರ್ಷಗಳಿಂದ ಅರಣ್ಯ ವೀಕ್ಷಕರಾಗಿ ಕೆಲಸ ಮಾಡುತ್ತಿದ್ದೇನೆ. ಸರ್ವೆ ನಂ. 67 ರಲ್ಲಿ ಎಷ್ಟು ಎಕರೆ ವಿಸ್ತೀರ್ಣ ಇರುತ್ತದೆ ಎಂದು ಗೊತ್ತಿಲ್ಲ. ಚಾಸಾ-2 ರವರು ಸ್ಥಳಕ್ಕೆ ಹೋದ 15 ನಿಮಿಷಗಳ ನಂತರ ನಾನು ಮತ್ತು ಚಾಸಾ-1 ರವರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ದಳಕ್ಕೆ ಹೋದಾಗ ಬೆಳಿಗ್ಗೆ 10.00 ಗಂಟೆ ಯಾಗಿತ್ತು. ನಾವು ಹೋಗುವಷ್ಟರಲ್ಲಿ ಮರಗಳನ್ನು ಕೆಳಗೆ ಉರುಳಿಸಿರುತ್ತಾರೆ. ಹಿಟಾಚಿ ವಾಹನವು ನಾವು ಹೋದಾಗ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಹಿಟಾಚಿ ವಾಹನದ ಬಣ್ಣ ನನಗೆ ಗೊತ್ತಿಲ್ಲ. ಕ್ವಾರೆ ಗಣಿಯಿಂದ ಹಿಟಾಚಿ ವಾಹನ ಮತ್ತು ಮರಗಳು 20 ಅಡಿಗಳ ಅಂತರದಲ್ಲಿ

ನಿಂತಿತ್ತು. ಹಿಟಾಚಿ ವಾಹನದ ಬಳಿ ಮತ್ತು ಮರಗಳ ಸ್ಥಳದಲ್ಲಿ ಆರೋಪಿತರು ಇರಲಿಲ್ಲ. ಹಿಟಾಚಿಯಿಂದ 1 ರಿಂದ 9 ಮರಗಳನ್ನು ಬೇರು ಸಮೇತ ನಾಶ ಪಡಿಸಿರುತ್ತಾರೆ. ಯಾವ ಯಾವ ಜಾತಿಯ ಮರಗಳೆಂದು ನನಗೆ ಗೊತ್ತಿಲ್ಲ. ಅರ್ಧ ಅಡಿಗಳಷ್ಟು ದಪ್ಪದ ಮರಗಳನ್ನು ಹಿಟಾಚಿ ವಾಹನದಿಂದ ಉರುಳಿಸಿರುತ್ತಾರೆ . ಘಟನಾ ಸ್ಥಳದಲ್ಲಿ ಬೆಳಿಗ್ಗೆ 10 ರಿಂದ ಒಂದೂವರೆವರೆಗೂ ಇದ್ದೆವು. ಅದೇ ದಿನ ಮಹಜರ್ ಕ್ರಮ ಜರುಗಿಸಿರುತ್ತೇವೆ. ಮಹಜರ್ ಸಮಯದಲ್ಲಿ ಚಾಸಾ-1 ಮತ್ತು ಹಾಜರಿದ್ದರು. ಮರಗಳ ವಿಸ್ತೀರ್ಣವನ್ನು ನಿಪಿ-1 ರಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ಹೇಳಿರುವುದಿಲ್ಲ. ನಿಪಿ-1 ಅನ್ನು ಸ್ಥಳದಲ್ಲಿ ತಯಾರು ಮಾಡಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಯಾವುದೇ ಹಿಟಾಚಿ ಇರಲಿಲ್ಲ ಎಂದರೆ ಸರಿಯಲ್ಲ. ಕ್ವಾರೆಯಿಂದ 50 ಮೀಟರ್ ಅಂತರದಲ್ಲಿ ಯಾವುದೇ ಮರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮರಗಳನ್ನು ಹಿಟಾಚಿ ವಾಹನದ ಸಹಾಯದಿಂದ ಬೇರ್ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**